KAN 102.2 Reg. No. ...................................

ಶ್ರೇಯಾಂಕ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಎಸ್.ಸಿ ಪದವಿ ಪರೀಕ್ಷೆ

ಅಕ್ಟೋಬರ್/ನವೆಂಬರ್ 2012

ಕನ್ನಡ ಭಾಷಾ ಪತ್ರಿಕೆ

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯಭಾಗವನ್ನು ಸಂದರ್ಭ ಸಹಿತ ವಿಶ್ಲೇಷಿಸಿರಿ. 1 ×5=5

1) ನೆಲದ ಮರೆಯ ನಿಧಾನದಂತೆ
ಮುಗಿಲ ಮರೆಯಲಡಗಿದ ಮಿಂಚಿನಂತೆ
ಬಯಲ ಮರೆಯಲಡಗಿದ ಮರೀಚಿಯಂತೆ,
ಕಂಗಳ ಮರೆಯಲಡಗಿದ ಬೆಳಗಿನಂತೆ,
ಗುಂಕೇಶ್ವರ ನಿನ್ನ ನಿಲವು.

2) ಅರಿತು ಅರಿವಿಲ್ಲದೆಯೆ
ಅನುಭವವನುಸಿರದೆಯೆ
ದೇವನನು ನೆರೆನಂಬಿ
ಮುಗಿಸುವುದು ಇರವ

ಆ) ಎರಡು ಸಾಲುಗಳಿಗೆ ಸಂದರ್ಭ ಸಹಿತ ವಿವರಣೆ ನೀಡಿರಿ. 2 ×3=6

1) ಎಣ್ಣೆ ಬೇರೆ, ಬತ್ತಿ ಬೇರೆ, ಎರಡೂ ಕೂಡಿ ಸೊಡರಾಯಿತ್ತು
2) ನಿನ್ನ ನೆಲ ನಿನ್ನ ನುಡಿ, ನಿನ್ನದೀ ಕೃಪಣ ಜನ
3) ಕುದಿ ಗೊಂಡರೂ ನಾನು ಹೇಗೆ ಹದಗೊಂಡಿದ್ದೇನೆ

ಇ) ಒಂದು ಪ್ರಶ್ನೆಗೆ ಉತ್ತರಿಸಿರಿ. 1×10=10

1) ಕುಮಾರವ್ಯಾಸ ಭಾರತದ ಕಿರಾತಾರ್ಜುನ ಕಾಳಗದ ಸ್ವಾರಸ್ಯವನ್ನು ವಿವರಿಸಿರಿ.
2) ನಾಡು, ನುಡಿ ಸಂಸ್ಕೃತಿಯ ಅವನತಿಯು 'ಮೋಟು ಮರದ ಮೇಲೊಂದು ಮುದಿಗಿಳಿ' ಕವನದಲ್ಲಿ ಹೇಗೆ ವರ್ಣಿತವಾಗಿದೆ? ವಿವರಿಸಿರಿ.

ಈ) ಒಂದು ಪ್ರಶ್ನೆಗೆ ಉತ್ತರಿಸಿರಿ. 1 ×7= 7

1) ಶರಣರ ಉದಯ ಅಲ್ಲಮನ ವಚನಗಳಲ್ಲಿ ಹೇಗೆ ನಿರೂಪಿತವಾಗಿದೆ.
2) 'ಅಕ್ಕಿ ಅರಳಿ ಅನ್ನವಾಗಿ' ಕವಿತೆಯ ಆಶಯವನ್ನು ವಿವರಿಸಿರಿ.

II. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ. 1 ×10=10

1) 'ಆದದ್ದೆಲ್ಲ ಒಳಿತೇ ಆಯಿತು' ಎಂಬ ಮನೋಭಾವದ ಅಗತ್ಯವನ್ನು ಲೇಖಕಿ ಹೇಗೆ ಸಮರ್ಥಿಸಿದ್ದಾರೆ? ವಿವರಿಸಿರಿ.
2) ಬರೆದಿಡುವುದರ ಮಹತ್ವವನ್ನು ನೇಮಿಚಂದ್ರ ಹೇಗೆ ನಿರೂಪಿಸಿದ್ದಾರೆ ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. 1 ×7=7

1) ವಿಜಯಲಕ್ಷ್ಮಿಯವರ ಸಾಧನೆಯನ್ನು ವಿವರಿಸಿರಿ.
2) 'ಮುಗಿಲು ಕೂಡಾ ಮಿತಿಯಲ್ಲ' ಎಂಬ ಲೇಖಕಿಯ ನಿಲುವನ್ನು ವಿವರಿಸಿರಿ.

III. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ. 1 ×6=6

1) ಅಲ್ಪ ವಿರಾಮವನ್ನು ವಿವರಿಸಿರಿ.
2) ಲಿಪ್ಯಂತರವನ್ನು ಉದಾಹರಣೆಗಳೊಂದಿಗೆ ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. 1 ×3=3

1) ಭಾವಸೂಚಕವನ್ನು ವಿವರಿಸಿ.
2) ಅರ್ಧವಿರಾಮದ ಕುರಿತು ಬರೆಯಿರಿ.

IV. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ. 1 ×10=5

1) 'ಧರ್ಮಕೊಂಡದ ಕತೆ'ಯ ಆಶಯವನ್ನು ಬರೆಯಿರಿ.
2) 'ಮೊಸರಿನ ಮಂಗಮ್ಮ' ಕತೆಯಲ್ಲಿನ ಕೌಟುಂಬಿಕ ಮತ್ತು ಸಾಮಾಜಿಕ ಸಂಬಂಧಗಳನ್ನು ಬರೆಯಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. 1 ×5=5

1) 'ನಮ್ಮೊಳಗಿನ ಜರೀನಾ' ಕತೆಯ ಸ್ತ್ರೀಪರ ಚಿಂತನೆಯನ್ನು ನಿರೂಪಿಸಿರಿ.
2) ದೇವಮ್ಮನ ಪಾತ್ರ ಚಿತ್ರಣ ನೀಡಿ.

V. ಅ) ಎರಡರ ಕುರಿತು ಟಿಪ್ಪಣಿ ಬರೆಯಿರಿ: 2 ×3=6

1) ಅಲ್ಲಮ ಪ್ರಭು
2) ಬೆಳಗೆರೆ ಜಾನಕಮ್ಮ
3) ತತ್ತ್ವಪದಗಳು

ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ. 5 ×1=5

1) 'ಕರ್ನಾಟ ಭಾರತ ಕಥಾ ಮಂಜರಿ' ಯಾರ ಕೃತಿ?
2) ಅಲ್ಲಮಪ್ರಭುವಿನ ಅಂಕಿತ ನಾಮ ತಿಳಿಸಿ.
3) 'ಶ್ರೀನಿವಾಸ' ಯಾರ ಕಾವ್ಯನಾಮ?
4) 'Shakespear' – ಕನ್ನಡಕ್ಕೆ ಲಿಪ್ಯಂತರಿಸಿರಿ.
5) ಜೋನಾಥನ್' – ಯಾರು?

**********

KAN 102.2 Reg. No. ...............................

ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ

ಅಕ್ಟೋಬರ್ 2013

ಕನ್ನಡ ಭಾಷಾ ಪತ್ರಿಕೆ – I

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯಭಾಗವನ್ನು ಸಂದರ್ಭ ಸಹಿತ ವಿಶ್ಲೇಷಿಸಿರಿ: 5

1) ನರನು ನೀ ಪೂರ್ವದಲಿ ಪೀತಾಂ
ಬರನ ವಿಮಲಾಂಶಪ್ರಸೂತನು
ಪರಮಋಷಿ ನೀನೆನ್ನ ಭಕ್ತನು ಚಿಂತೆ ಬೇಡಿನ್ನು
ವರದನಾದೆನು ಮಗನೆ ಶಸ್ತ್ರೋ
ತ್ಕರವನಿದನೀ ಮುನ್ನ ಕೊಳ್ಳೆಂ
ದುರುತರ ಪ್ರೇಮದಲಿ ಕೊಟ್ಟನು ಖಡ್ಗ ಶರ ಧನುವ

2) ಉರಿಯುವಿರಿ ಏಕೆ ಹಾಗೆ?
ಹಸಿಮೆಣಸಿನ ಖಾರದ ಹಾಗೆ
ಹೀಗೆ ಬೆರೆಯಿರಿ ಉಪ್ಪು ಹುಳಿಯೊಡನೆ
ನಾಲಿಗೆ ನೀರೂರುವ ಹಾಗೆ
ಖಾರವಿರಲಿಲ್ಲವೇ ನನ್ನಲ್ಲೂ?
ಹೇಗೆ ಪಳಗಿಸಿಟ್ಟಿದ್ದೇನೆ ಸೇರಿ ಈ ಮೂರಗೊಳಗೆ!

ಆ) ಎರಡು ಸಾಲುಗಳಿಗೆ ಸಂದರ್ಭ ಸಹಿತ ವಿವರಣೆ ನೀಡಿರಿ: 6

1) ಅಕಟಕಟಾ ಶಬ್ದದ ಲಜ್ಜೆಯ ನೋಡಾ
2) ಅಸಮಜ್ಞಾನಿಯಾಗಿ ಶರಣರೊಳಗೆ ಬೆರವನೇ
3) ಎಲೆಗಿಳಿಯೆ, ಈ ತೆರದಿ ನೀ ಸಾಯಲೇನಹುದು?

ಇ) ಒಂದು ಪ್ರಶ್ನೆಗೆ ಉತ್ತರಿಸಿರಿ: 10

1) ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಪಡೆದುಕೊಂಡ ಸನ್ನಿವೇಶವನ್ನು ವಿವರಿಸಿರಿ.
2) ನಾಡು, ನುಡಿ, ಸಂಸ್ಕೃತಿಯ ಅವನತಿಯು 'ಮೋಟು ಮರದ ಮೇಲೊಂದು ಗಿಳಿ' ಕವಿತೆಯಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿರಿ.

ಈ) ಒಂದು ಪ್ರಶ್ನೆಗೆ ಉತ್ತರಿಸಿರಿ: 7

1) ಗುಹೇಶ್ವರ ಮತ್ತು ಶರಣ ಇವರ ಸಂಬಂಧದ ಅನ್ಯೋನ್ಯತೆಯು ಅಲ್ಲಮ ಪ್ರಭುವಿನ ವಚನಗಳಲ್ಲಿ ಹೇಗೆ ಪ್ರಕಟಗೊಂಡಿದೆ?
2) 'ಹೆಣ್ಣಾಟ' ಕವಿತೆಯಲ್ಲಿ ಹೆಣ್ಣಿನ ಬದುಕಿನ ಪರಾಧೀನ ಸ್ಥಿತಿ ಹೇಗೆ ಚಿತ್ರಿತವಾಗಿದೆ?

II. ಅ) ಒಂದಕ್ಕೆ ಉತ್ತರ ಬರೆಯಿರಿ: 10

1) 'ಮೊಸರಿನ ಮಂಗಮ್ಮ' ಕಥೆಯಲ್ಲಿನ ಕೌಟುಂಬಿಕ ಸಂಬಂಧಗಳನ್ನು ಕುರಿತು ಬರೆಯಿರಿ.
2) 'ಧರ್ಮಕೊಂಡದ ಕಥೆ'ಯಲ್ಲಿ ಧರ್ಮವು ಜೀವವಿನಾಶಕವಾಗುವ ಸಂದರ್ಭ ಹೇಗೆ ಚಿತ್ರಿತವಾಗಿದೆ? ವಿವರಿಸಿರಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿರಿ. **7**

1) 'ನಮ್ಮೊಳಗಿನ ಜರೀನಾ' – ಕತೆಯ ಆಶಯವನ್ನು ಬರೆಯಿರಿ.

2) ನಂಜಮ್ಮನ ಪಾತ್ರ ಚಿತ್ರಣ ನೀಡಿರಿ.

**III.** ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ. **10**

1) 'ಆಯ್ಕೆಯಿದೆ ನಮ್ಮ ಕೈಯಲ್ಲಿ' ಎಂದು ನೇಮಿಚಂದ್ರರು ಹೇಳಲು ಕಾರಣವೇನು? ವಿವರಿಸಿರಿ.

2) ಅತಿ ಕೆಟ್ಟ ಅನುಭವದಲ್ಲೂ ಒಳ್ಳೆಯದನ್ನು ಹುಡುಕಬಹುದೆಂದು ಲೇಖಕಿ ಹೇಗೆ ನಿರೂಪಿಸಿದ್ದಾರೆ? ವಿವರಿಸಿರಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿರಿ: **5**

1) ವಿಜಯಲಕ್ಷ್ಮಿಯವರ ಸಾಧನೆಯನ್ನು ನಿರೂಪಿಸಿರಿ.

2) ಮುಗಿಲು ಕೂಡಾ ಮಿತಿಯಲ್ಲಿ – ಎಂಬುದನ್ನು ಲೇಖಕಿ ಹೇಗೆ ನಿರೂಪಿಸಿದ್ದಾರೆ?

**IV.** ಅ) **ಒಂದು** ಪ್ರಶ್ನೆಗೆ ಉತ್ತರಿಸಿ: **6**

1) ಪೂರ್ಣ ವಿರಾಮವನ್ನು ವಿವರಿಸಿರಿ.

2) ಅಲ್ಪವಿರಾಮದ ಕುರಿತು ಬರೆಯಿರಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿ: **3**

1) ಪ್ರಶ್ನೆ ಸೂಚಕವನ್ನು ಕುರಿತು ಬರೆಯಿರಿ.

2) ಇಂಗ್ಲಿಷ್‌ನಿಂದ ಕನ್ನಡ ಲಿಪ್ಯಂತರ ಮಾಡುವಾಗ ಅನುಸರಿಸಬೇಕಾದ ನಿಯಮಗಳು ಯಾವುವು?

**V.** ಅ) **ಎರಡಕ್ಕೆ** ಟಿಪ್ಪಣಿ ಬರೆಯಿರಿ: **6**

1) ಅಶ್ವತ್ಥ

2) ಜಾಹ್ನವಿಧರ

3) ಯು.ಎಸ್. ಶ್ರೀಧರ್ ಆರಾಧ್ಯ

ಆ) **ಒಂದು** ವಾಕ್ಯದಲ್ಲಿ ಉತ್ತರಿಸಿ: **5**

1) ಅಲ್ಲಮಪ್ರಭುವಿನ ಅಂಕಿತನಾಮ ಯಾವುದು?

2) ತ್ರಿಪುರಾರಿ ಎಂದು ಯಾರನ್ನು ಹೇಳಲಾಗಿದೆ?

3) 'ಏಕೆ ಬಯಲು ಭ್ರಾಂತು ನಿನಗೆ' ತತ್ವ ಪದವನ್ನು ಬರೆದವರು ಯಾರು?

4) ರಿಚರ್ಡ್ ಬ್ಯಾಕ್ ಬರೆದ ಕೃತಿ ಯಾವುದು?

5) Spanner - ಕನ್ನಡಕ್ಕೆ ಲಿಪ್ಯಂತರಿಸಿರಿ.

**********

KAN 103.2

**ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ – ಅಕ್ಟೋಬರ್ 2014**

**ಕನ್ನಡ ಭಾಷಾಪತ್ರಿಕೆ**

**ಸಮಯ: 3 ಘಂಟೆ** **ಅಂಕಗಳು: 80**

I **(ಅ) ಕೆಳಗಿನ ಪದ್ಯ ಭಾಗವೊಂದರ ಸಂದರ್ಭ ಸ್ವಾರಸ್ಯ ವಿವರಿಸಿ** **5**

(1) ಕುಲಮನೆ ಮುನ್ನಮುಗ್ಗಡಿಪಿರೇಂಗಳ ನಿಮ್ಮ ಕುಲಂಗಳಾಂತು ಮಾ
ರ್ಮಲೆವನನಟ್ಟಿತಿಂಬುವೆ ಕುಲಂ ಕುಲಮಲ್ತು ಚಲಂ ಕುಲಂ ಗುಣಂ ।
ಕುಲಮಭಿಮಾನವೊಂದೆ ಕುಲಮಣ್ಣೆಕುಲಂ ಬಗೆವಾಗಳೀಗಳೀ
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟುಮಾಡುಗುಂ ॥

(2) ಇಂದು ಬಾಳಿದು ಕೂಳ ಕಾಳಿಗವು, ಹೊಟ್ಟೆಯೇ
ಕೇಂದ್ರವಾಗಿದೆ ನರನ ಜೀವಿತಕ್ಕೆ
ಅನ್ನದನ್ಯಾಯದಾವಾಗ್ನಿಯಲಿ ಕರಗುತಿದೆ
ನರತೆ, ಸಂಸ್ಕೃತಿ, ಪ್ರೀತಿ, ದಿವದ ಬಯಕೆ

**ಆ) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ** **6**

(1) 'ಭಗವತಿಯೇಮಿವೇಟ್ವ ತೆರದಿಂ ಕಥೆಯಾಯ್ತುವರೇಮಿ'

(2) 'ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ'

(3) 'ಮುಂಗೋಳಿ ಕೂಗಿತು ಮೂಡು ಕೆಂಪೇರಿತು' ಸೀಗೆಯ ಮೆಳೆಯಲ್ಲಿ ಮಲಗವನೆ

**ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ** **10**

(1) ಕರ್ಣ–ದ್ರೋಣ–ಭೀಷ್ಮರ ವಾಗ್ವಾದದ ಸನ್ನಿವೇಶವನ್ನು ವಿವರಿಸಿರಿ.

(2) ಬಸವಣ್ಣನವರು ಸಮಾಜದಲ್ಲಿನ ಲೋಪದೋಷಗಳನ್ನು ಹೇಗೆ ತಿದ್ದಲು ಪ್ರಯತ್ನಿಸಿದರು? ವಿವರಿಸಿ.

**ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** **7**

(1) ನಾಗವ್ವ ಚಿತೆ ಏರಲು ಕಾರಣಗಳೇನು? ವಿವರಿಸಿರಿ.

(2) ಸವಿತಾ ನಾಗಭೂಷಣ ಅವರ 'ಸೋಲೇ ಇಲ್ಲ' ಕವನದ ಸ್ವಾರಸ್ಯವನ್ನು ವಿವರಿಸಿರಿ.

II **ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** **10**

(1) ಬುಲ್‌ಡೋಜರ್ ಸಂಸ್ಕೃತಿಯ ಸಾಧಕ–ಬಾಧಕಗಳನ್ನು ಕುರಿತು ವಿವರಿಸಿರಿ.

(2) 'ಉಡುಗೊರೆ ಎನ್ನುವುದು ಪ್ರೀತಿಯ ವಿನಿಮಯದ ಸಂಕೇತ' ಇದರ ಕುರಿತಂತೆ ನೇಮಿಚಂದ್ರರ ಅಭಿಪ್ರಾಯಗಳೇನು?

**ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** **7**

(1) ಸೋಲುವ ಆಟದಲ್ಲಿ ಪಾಲ್ಗೊಳ್ಳಬೇಕಾದ ಅನಿವಾರ್ಯತೆ – ಎಂಬುದನ್ನು 'ಹುಲಿಸವಾರಿ' ಪ್ರಬಂಧ ಹೇಗೆ ನಿರೂಪಿಸಿದೆ.

(2) 'ಕಷ್ಟಗಳು ಬೇಡುವುದನ್ನು ಮಾತ್ರವಲ್ಲ, ಬಾಳುವುದನ್ನು ಕಲಿಸುತ್ತದೆ.' ಇದನ್ನು ಎ.ಆರ್. ಮಣಿಕಾಂತ್ ಅವರ ಲೇಖನ ಹೇಗೆ ಸಾದರ ಪಡಿಸುತ್ತದೆ?

III **ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ** **10**

(1) ವಸ್ತು, ಪಾತ್ರ, ಭಾಷೆ ದೃಷ್ಟಿಯಿಂದ 'ಮೊಸರಿನ ಮಂಗಮ್ಮ' ಕಥೆಯ ಮಹತ್ವವನ್ನು ತಿಳಿಸಿರಿ.

(2) ಸಮಕಾಲೀನ ಬದುಕಿನ ಸಂದರ್ಭದಲ್ಲಿ 'ಕೊನೆಯ ಗಿರಾಕಿ' ಕಥೆಯ ಮಹತ್ವವೇನು? ವಿವರಿಸಿರಿ.

**ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** **7**

(1) ಗುಲಾಬಿ ಟಾಕೀಸಿನಿಂದ 'ಸ್ತ್ರೀಯರ ಮನದಲ್ಲಿದ್ದ ಸಣ್ಣ ಅಲೆ ಅವರ ಬದುಕಿನ ದಿಕ್ಕನ್ನೇ ಬದಲಾಯಿಸುತ್ತದೆ.' – ಪ್ರಸ್ತುತ ಕಥೆಯಲ್ಲಿ ಲೇಖಕಿ ಹೇಗೆ ವಿಶ್ಲೇಷಿಸಿದ್ದಾರೆ?

(2) ಜರೀನಾ ಕೇವಲ ಪಾತ್ರವಾಗಿರದೆ ನಮ್ಮೊಳಗಿನ ಪ್ರಜ್ಞೆಯ ಒಂದು ಭಾಗ. ಇದನ್ನು ಕಥೆಯ ಹಿನ್ನೆಲೆಯಲ್ಲಿ ವಿವರಿಸಿರಿ.

IV **ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** **6**

(1) ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಹೇಗೆ ಬೆಳೆದುಬಂದಿದೆ? ವಿವರಿಸಿರಿ.

(2) ಪ್ರಬಂಧದ ಲಕ್ಷಣ ಮತ್ತು ಸ್ವರೂಪವನ್ನು ವಿವರಿಸಿರಿ.

V **ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.** **6**

(1) ಪಂಪ

(2) ಬಸವಣ್ಣ

(3) ನಾಗೇಶ್ ಹೆಗಡೆ

**ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ** **6**

(1) 'ಸಣ್ಣ ಕತೆಗಳ ಜನಕ' ಎಂದು ಹೆಸರಾದವರು ಯಾರು?

(2) ನಿರಂಜನರ ನಿಜ ನಾಮಧೇಯವೇನು?

(3) 'ನಮ್ಮೊಳಗಿನ ಜರೀನಾ' ಯಾರು ಬರೆದ ಕೃತಿ?

(4) 'ಆದಿ ಪುರಾಣಂ' ಯಾರು ಬರೆದ ಮಹಾಕಾವ್ಯ?

(5) 'ಮೈಸೂರು ಮಲ್ಲಿಗೆ' ಯಾರ ಕವನ ಸಂಕಲನ?

(6) 'ಇರುವುದೊಂದೇ ಭೂಮಿ' ಯಾರ ಕೃತಿ?

*****

KAN 103.2

ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ – ಅಕ್ಟೋಬರ್ 2015

ಕನ್ನಡ ಭಾಷಾಪತ್ರಿಕೆ

ಸಮಯ: 3 ಘಂಟೆ ಅಂಕಗಳು: 80

I (ಅ) ಕೆಳಗಿನ ಪದ್ಯ ಭಾಗವೊಂದರ ಸಂದರ್ಭ ಸ್ವಾರಸ್ಯ ವಿವರಿಸಿ 5

(1) ಕುಲಮನೆ ಮುನ್ನಮುಗ್ಗಡಿಪಿರೇಂಗಳ ನಿಮ್ಮ ಕುಲಂಗಳಾಂತು ಮಾ
ರ್ಮಲೆವನನಟ್ಟಿತಿಂಬುವೆ ಕುಲಂ ಕುಲಮಲ್ತು ಚಲಂ ಕುಲಂ ಗುಣಂ ।
ಕುಲಮಭಿಮಾನವೊಂದೆ ಕುಲಮಣ್ಮಿಕುಲಂ ಬಗೆವಾಗಳೀಗಳೀ
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟುಮಾಡುಗುಂ ॥

(2) ಹಾವು ತಿಂದವರ ನುಡಿಸಬಹುದು ಗರಹಿಡಿದವರ ನುಡಿಸಬಹುದು
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ
ಬಡತನವೆಂಬ ಮಂತ್ರವಾದಿ ಬರಲು ಒಡನೆ ನುಡಿವರಯ್ಯ
ಕೂಡಲಸಂಗಮದೇವಾ

ಆ) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ 6

(1) 'ಸೂಳ್ಪಡೆಯಲಪ್ಪುದು ಕಾಣಾ ಮಹಾಜಿರಂಗದೊಳ್'

(2) 'ನೀರಲ್ಲ ಈ ಹೊಳೆಯ ತುಂಬ ಎಳನೀರು'

(3) 'ಮೂಕರಾಗಿ ಶಾಪ ಸಹಿಸಿದರಲೇ ಕೆಳದಿಯರೆ

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ 10

(1) 'ಕುಲಂ ಕುಲಮಲ್ತು' ಕಾವ್ಯಭಾಗದ ಹಿನ್ನೆಲೆಯಲ್ಲಿ ಕರ್ಣ, ದ್ರೋಣ, ಭೀಷ್ಮರ ಸಂಭಾಷಣೆಯನ್ನು ವಿವರಿಸಿ.

(2) 'ಕಟ್ಟುವೆವು ನಾವು' ಕವನದ ಆಶಯ ವಿವರಿಸಿ.

ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 7

(1) ಮುಗ್ಧ ಹೆಣ್ಣೊಬ್ಬಳ ಬಲಿದಾನ 'ನಾಗವ್ವ' ಕವನದಲ್ಲಿ ಹೇಗೆ ಮೂಡಿಬಂದಿದೆ?

(2) ಬಸವಣ್ಣನವರ ವಚನಗಳಲ್ಲಿ ಬರುವ ಆತ್ಮವಿಮರ್ಶೆಯ ಅಂಶಗಳನ್ನು ಚರ್ಚಿಸಿ.

II ಅ) ಒಂದು ಪ್ರಶ್ನೆಗೆ ಉತ್ತರಿಸಿರಿ 10

(1) ಪೆಟ್ರೀಶಿಯಾ ನಾರಾಯಣ್ ಬದುಕನ್ನು ಸವಾಲಾಗಿ ಸ್ವೀಕರಿಸಿದ ಬಗೆ ಹೇಗೆ?

(2) ವ್ಯಾಪಾರಿ ಮನೋಭಾವದ ಮೇಲಾಟದಲ್ಲಿ ಮನುಷ್ಯ ಸಂವೇದನೆಗಳು ಗೌಣವಾಗಿರುವುದನ್ನು 'ಹುಲಿಸವಾರಿ' ಪ್ರಬಂಧದ ಹಿನ್ನೆಲೆಯಲ್ಲಿ ವಿವರಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 7

(1) ಉಡುಗೊರೆ ಕುರಿತಂತೆ ನೇಮಿಚಂದ್ರ ಅವರ ಅಭಿಪ್ರಾಯಗಳನ್ನು ಚರ್ಚಿಸಿ.

(2) ಬುಲ್ಡೋಜರ್ ನಮ್ಮ ಸಂಸ್ಕೃತಿಯ ಭಾಗವಾಗುತ್ತಿರುವುದರ ಅಪಾಯಗಳನ್ನು ಲೇಖಕ ನಾಗೇಶ ಹೆಗಡೆಯವರು ಹೇಗೆ ಚಿತ್ರಿಸಿದ್ದಾರೆ?

14/10 (55)

III ಅ) **ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ** 10

(1) ಬಡತನ ಮತ್ತು ಶ್ರೀಮಂತಿಕೆಯ ಮುಖಾಮುಖಿ 'ನೋಂಬು' ಕಥೆಯಲ್ಲಿ ಹೇಗೆ ಚಿತ್ರಿತವಾಗಿದೆ?

(2) 'ಮೊಸರಿನ ಮಂಗಮ್ಮ' ಕಥೆಯ ಮಂಗಮ್ಮ ಬದುಕನ್ನು ಗ್ರಹಿಸಿದ ರೀತಿ ಎಂತಹುದು?

ಆ) **ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** 7

(1) 'ಕೊನೆಯ ಗಿರಾಕಿ' ಕಥೆಯ ಶೀರ್ಷಿಕೆಯ ಔಚಿತ್ಯವನ್ನು ವಿವೇಚಿಸಿರಿ.

(2) ಒಂದು ಒಸಗೆ ಒಯ್ಯುವುದಿತ್ತು' ಕಥೆಯ ಜಲಜ ಚಿಕ್ಕಮ್ಮ ಬದುಕನ್ನು ಪ್ರೀತಿಸುತ್ತಿದ್ದ ಪರಿ ಎಂತಹುದು?

IV ಅ) **ಒಂದು ಪ್ರಶ್ನೆಗೆ ಉತ್ತರಿಸಿರಿ** 6

(1) ಪ್ರಬಂಧ ಎಂದರೇನು? ವಿವರಿಸಿ.

(2) ಆಹ್ವಾನ ಪತ್ರಿಕೆಯ ಸ್ವರೂಪ ಕುರಿತು ಬರೆಯಿರಿ.

V ಅ) **ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.** 6

(1) ಪಂಪ

(2) ಬಸವಣ್ಣ

(3) ವಚನಗಳು

ಆ) **ಒಂದು ವಾಕ್ಯದಲ್ಲಿ ಉತ್ತರಿಸಿರಿ** 6

(1) 'ಶ್ರೀನಿವಾಸ' ಯಾರ ಕಾವ್ಯನಾಮ?

(2) ಕುಳುಕುಂದ ಶಿವರಾಯರ ಕಾವ್ಯನಾಮ ಯಾವುದು?

(3) 'ವಿಕ್ರಮಾರ್ಜುನ ವಿಜಯಂ' ಯಾರ ಮಹಾಕಾವ್ಯ

(4) 'ಮೈಸೂರು ಮಲ್ಲಿಗೆ' ಯಾರ ಕವನ ಸಂಕಲನ?

(5) 'ಅಮ್ಮ ಹೇಳಿದ ಎಂಟು ಸುಳ್ಳುಗಳು' ಯಾರ ಕೃತಿ?

(6) 'ಇರುವುದೊಂದೇ ಭೂಮಿ' ಯಾರ ಕೃತಿ?

*****

KAN 103.2

ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ – ಅಕ್ಟೋಬರ್ 2016

ಕನ್ನಡ ಭಾಷಾಪತ್ರಿಕೆ

ಸಮಯ: 3 ಘಂಟೆ ಅಂಕಗಳು: 80

**I (ಅ) ಕೆಳಗಿನ ಪದ್ಯ ಭಾಗವೊಂದರ ಸಂದರ್ಭ, ಸ್ವಾರಸ್ಯವನ್ನು ವಿವರಿಸಿ** 5X1=5

(1) ಕುಲಜರನುದ್ಧತರಂ ಭುಜ
ಬಲಯುತರಂ ಹಿತರನೀ ಸಭಾಮಧ್ಯದೊಳ
ಗ್ಗಲಿಸಿದ ಮದದಿಂ ನಾಲಗೆ
ಕುಲಮಂ ತುಬ್ಬುವವೊಲುಱದೆ ನೀಂ ಕೆಡೆನುಡಿವೈ

(2) ಸೆಟ್ಟಿಯೆಂಬೆನೆ ಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ?
ಡೋಹರನೆಂಬೆನೆ ಕಕ್ಕಯ್ಯನ? ಮಾದಾರನೆಂಬೆನೆ ಚೆನ್ನಯ್ಯನ?
ಆನು ಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯ.

**ಆ) ಕೆಳಗಿನ ಪದ್ಯದ ಸಾಲುಗಳಲ್ಲಿ ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ** 3X2=6

(1) 'ಪಗೆವಾಡಿಯೊಳ್ ನಗಿಸಿಕೊಂಡೊಡೆ ಬಂದಪುದೇಂ ಸುಯೋಧನಾ'

(2) 'ತುಂಬುನದಿ ತಾನು ಅಬ್ಬರಿಸುವುದು ತಪ್ಪಲ್ಲ'

(3) 'ಜಾತಿಮತ ಭೇದಗಳ ಕಂದಕವು ಸುತ್ತಲೂ'

**ಇ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ದೀರ್ಘ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** 10X1=10

(1) 'ಕುಲಂ ಕುಲಮಲ್ತು' ಹಾಗಾದರೆ ಕುಲ ಅಂದರೆ ಯಾವುದು? ಪಠ್ಯದ ಹಿನ್ನೆಲೆಯಿಂದ ವಿವರಿಸಿ.

(2) ಬಸವಣ್ಣನ ವಚನಗಳ ಆಶಯವೇನು? ವಿವರಿಸಿ.

**ಈ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** 7X1=7

(1) ಅಡಿಗರು 'ಹೊಸನಾಡನ್ನು ಕಟ್ಟುವ' ಬಗೆಯನ್ನು ವಿವರಿಸಿ.

(2) ಜನಪದ ಕಾವ್ಯ 'ನಾಗವ್ವ'ದಲ್ಲಿ ಅನಾವರಣಗೊಳ್ಳುವ ಪ್ರಾಮಾಣಿಕತೆಯ ಸ್ವರೂಪವನ್ನು ಕುರಿತು ಬರೆಯಿರಿ.

**II ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ದೀರ್ಘ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** 10X1=10

(1) 'ಬುಲ್‌ಡೋಜರ್ ಸಂಸ್ಕೃತಿ'ಯ ಭಾಗ ಆಗುವ ಕುರಿತು ಬರೆಯಿರಿ.

(2) ಪಟ್ರೇಶಿಯಾ ಸ್ವಾವಲಂಬಿ ಬದುಕನ್ನು ಕಟ್ಟುವ ಸಂದರ್ಭದಲ್ಲಿ ಅನುಭವಿಸಿದ ಪಾಡುಗಳೇನು?

**ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** 7X1=7

(1) ಬಂಡವಾಳಶಾಹಿ ಜಗತ್ತಿನಲ್ಲಿ ಮಾನವೀಯತೆ ಕಣ್ಮರೆಯಾಗುತ್ತಿದೆ ಎಂಬುದನ್ನು 'ಹುಲಿ ಸವಾರಿ' ಪ್ರಬಂಧದ ಹಿನ್ನೆಲೆಯಿಂದ ವಿವರಿಸಿ.

(2) 'ಆತ ಕೊಟ್ಟ ವಸ್ತು ಒಡವೆ' ಲೇಖನದ ಆಶಯವೇನು?

**III ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **10X1=10**

(1) 'ಕೊನೆಯ ಗಿರಾಕಿ' ಯಾರು? ಶೋಷಣೆಯ ನಿರಂತರತೆಯ ಸಂಕೇತವಾಗಿ ಈ ಕಥೆಯನ್ನು ವಿವರಿಸಿ.

(2) ಬಡತನದ ತೀವ್ರತೆಯನ್ನು 'ನೋಂಬು' ಕಥೆಯು ಮುಂದಿಡುವ ಬಗೆಯನ್ನು ವಿವರಿಸಿ.

**ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **7X1=7**

(1) ಪ್ರಾದೇಶಿಕ ಸಂಸ್ಕೃತಿಯ ಹಿನ್ನೆಲೆಯಿಂದ 'ಒಂದು ಒಸಗೆ ಒಯ್ಯುವುದಿತ್ತು' ಕಥೆಯನ್ನು ವಿವರಿಸಿ.

(2) ಮೊಸರಿನ ಮಂಗಮ್ಮಳ ಸಮಸ್ಯೆ ಯಾವುದು? ಅದು ಪರಿಹಾರವಾದ ಬಗೆ ಹೇಗೆ?

**IV ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **6X1=6**

(1) ಪ್ರಬಂಧ ಎಂದರೇನು? ವಿವರಿಸಿ.

(2) ಆಹ್ವಾನ ಪತ್ರಿಕೆಯ ಸ್ವರೂಪದ ಕುರಿತಂತೆ ಬರೆಯಿರಿ.

**V ಅ) ಕೆಳಗಿನ ಪ್ರಶ್ನೆಗಳಲ್ಲಿ ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.** **3X2=6**

(1) ಪಂಪ

(2) ಬಸವಣ್ಣ

(3) ವಚನಗಳು

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ/ಪದದಲ್ಲಿ ಉತ್ತರಿಸಿರಿ** **6X1=6**

(1) 'ವಿಕ್ರಮಾರ್ಜುನ ವಿಜಯ' ಕೃತಿಗೆ ಇರುವ ಇನ್ನೊಂದು ಹೆಸರೇನು?

(2) ಬಸವಣ್ಣನವರ ವಚನಗಳ ಅಂಕಿತವೇನು?

(3) 'ಅಮ್ಮ ಹೇಳಿದ ಎಂಟು ಸುಳ್ಳುಗಳು' ಇದು ಯಾರ ಕೃತಿ?

(4) 'ಭೂಮಿ ಗೀತ' ಕವನದ ಕರ್ತೃ ಯಾರು?

(5) 'ಮೈಸೂರು ಮಲ್ಲಿಗೆ ಕವಿ' ಎಂದೇ ಖ್ಯಾತರಾದವರು ಯಾರು?

(6) 'ಮಮ್ತಾಜಳ ಮಹಲು' ಯಾರ ಕವನ ಸಂಕಲನ?

*****